ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	492(626)
ಸದಸ್ಯರ ಹೆಸರು	ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ವಿಷಯ	ಕೋವಿಡ್-19 ಸೋಂಕಿನಿಂದ ಮರಣ ಹೊಂದಿದ ಕುಟುಂಬದವರಿಗೆ ಪರಿಹಾರ ನೀಡಿರುವ ಬಗ್ಗೆ.
ಉತ್ತರಿಸಬೇಕಾದ ದಿನಾಂಕ	21.02.2022
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	**ಉತ್ತರ**
ಅ)ರಾಜ್ಯದಲ್ಲಿ ಕೋವಿಡ್-19ರ ಸೋಂಕಿನಿಂದ ಕಳೆದ 3 ವರ್ಷಗಳಿಂದ ಇಲ್ಲಿಯ ತನಕ ಮೃತಪಟ್ಟವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಆರೋಗ್ಯ ಇಲಾಖೆಯ Covid death ಬುಲೆಟಿನ್ ಅನ್ವಯ ದಿನಾಂಕ: 16.02.2022 ರವರೆಗೆ ರಾಜ್ಯದಲ್ಲಿ ಒಟ್ಟು 39712 ಕೋವಿಡ್-19 ಮೃತ ಪ್ರಕರಣಗಳು ದಾಖಲಾಗಿರುತ್ತದೆ. ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ.
ಆ)ಕೋವಿಡ್-19ರ ಸೋಂಕಿನಿಂದ ಮೃತರಾದ ಪ್ರತಿ ಅರ್ಹ ಕುಟುಂಬದ ವಾರಸುದಾರರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡಿರುವ ಪರಿಹಾರದ ಮೊತ್ತವೆಷ್ಟು; (ಮಾಹಿತಿ ನೀಡುವುದು)	ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರ ಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF)ಯಿಂದ ನೇರ ಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದೆ. ಮುಂದುವರೆದು, ರಾಜ್ಯ ಸರ್ಕಾರವು ಘೋಷಿಸಿರುವಂತೆ ಕೋವಿಡ್-19 ವೈರಾಣು ಸೋಂಕಿನಿಂದಾಗಿ ಸದಸ್ಯರನ್ನು ಕಳೆದುಕೊಂಡಂತಹ ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್) ಕುಟುಂಬಕ್ಕೆ ಹೆಚ್ಚುವರಿಯಾಗಿ ರೂ.1.00 ಲಕ್ಷ ರೂಪಾಯಿ ಪರಿಹಾರವನ್ನು ಚೆಕ್ ಮೂಲಕ ಪಾವತಿಸಲಾಗುತ್ತಿದೆ.
ಇ)ಈ ಪರಿಹಾರಕ್ಕಾಗಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು; ಪರಿಹಾರ ನೀಡಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಇರುವ ಅರ್ಜಿದಾರರಿಗೆ ಎಷ್ಟು ದಿನಗಳಲ್ಲಿ ಪರಿಹಾರ ನೀಡಲಾಗುವುದು;	ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್ ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರ ಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF)ಯಿಂದ ನೇರ ಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದ್ದು, ದಿನಾಂಕ:10.02.2022 ರವರೆಗೆ ರಾಜ್ಯದಲ್ಲಿ ಒಟ್ಟು 28006 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಅನುಮೋದಿಸಲಾದ 27462 ಪ್ರಕರಣಗಳಿಗೆ ತಲಾ ರೂ.50,000/- ದಂತೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗಿದೆ. ಉಳಿಕೆ 544 ಪ್ರಕರಣಗಳು ಪರಿಶೀಲನಾ ಹಂತದಲ್ಲಿದ್ದು , ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಅರ್ಹ ಪ್ರಕರಣಗಳಿಗೆ ಶೀಘ್ರವೇ ಪರಿಹಾರ ವಿತರಿಸಲು ಕ್ರಮವಹಿಸಲಾಗುವುದು. ಮುಂದುವರೆದು, ರಾಜ್ಯ ಸರ್ಕಾರವು ಬಿ.ಪಿ.ಎಲ್ ಕುಟುಂಬದವರಿಗೆ ಘೋಷಿಸಿರುವ ಹೆಚ್ಚುವರಿ ರೂ.1.00 ಲಕ್ಷ ಪರಿಹಾರಕ್ಕಾಗಿ

<table>
<tr><td></td><td>ದಿನಾಂಕ:10.02.2022 ರವರೆಗೆ ಒಟ್ಟು 13926 ಅರ್ಜಿಗಳು ಸ್ವೀಕೃತವಾಗಿದ್ದು, ಪರಿಶೀಲನೆಯ ನಂತರ ಜಿಲ್ಲಾಧಿಕಾರಿಗಳು/ಬಿಬಿಎಂಪಿ ಜಂಟಿ ಆಯುಕ್ತರಿಂದ ಅನುಮೋದನೆಯಾದ 13698 ಪ್ರಕರಣಗಳಿಗೆ ತಲಾ ರೂ.1.00 ಲಕ್ಷ ಪರಿಹಾರವನ್ನು ಚೆಕ್ ಮೂಲಕ ವಿತರಿಸಲು ಕ್ರಮವಹಿಸಲಾಗಿದೆ. ಉಳಿಕೆ 228 ಪ್ರಕರಣಗಳು ಪರಿಶೀಲನಾ ಹಂತದಲ್ಲಿದ್ದು, ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿ ಅನುಮೋದನೆ ನೀಡಿದ ನಂತರ ಅರ್ಹ ಪ್ರಕರಣಗಳಿಗೆ ಶೀಘ್ರವೇ ಪರಿಹಾರ ವಿತರಿಸಲು ಕ್ರಮವಹಿಸಲಾಗುವುದು.</td></tr>
<tr><td>ಈ)ಹಾಗೆಯೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮೃತರಾದ ಪ್ರತಿ ಅರ್ಹ ಕುಟುಂಬದ ವಾರಸುದಾರರಿಗೆ ಸಂಪೂರ್ಣವಾಗಿ ಪರಿಹಾರದ ಮೊತ್ತವನ್ನು ವಿತರಣೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಈ ಎರಡು ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು;</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇದುವರೆವಿಗೆ ಸ್ವೀಕೃತವಾದ ಅರ್ಜಿಗಳಲ್ಲಿ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಅನುಮೋದಿಸಲಾದ ಎಲ್ಲಾ ಪ್ರಕರಣಗಳಿಗೆ ಪರಿಹಾರ ವಿತರಿಸಲಾಗಿದೆ.
ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪರಿಹಾರ ವಿತರಿಸಲಾಗಿರುವ ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ.
<u>ಮೈಸೂರು ಜಿಲ್ಲೆ:</u>
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>SDRF ಅನುದಾನದಡಿ ರೂ.50,000/- ಪರಿಹಾರ</th><th>ರಾಜ್ಯ ಸರ್ಕಾರದ ರೂ.1.00ಲಕ್ಷ ಪರಿಹಾರ (ಬಿಪಿಎಲ್ ಪ್ರಕರಣಗಳು)</th></tr>
<tr><td>1.</td><td>ಹೆಗ್ಗಡದೇವನಕೋಟೆ</td><td>43</td><td>33</td></tr>
<tr><td>2.</td><td>ಹುಣಸೂರು</td><td>96</td><td>56</td></tr>
<tr><td>3.</td><td>ಕೃಷ್ಣರಾಜನಗರ</td><td>81</td><td>58</td></tr>
<tr><td>4.</td><td>ಮೈಸೂರು</td><td>1099</td><td>444</td></tr>
<tr><td>5.</td><td>ನಂಜನಗೂಡು</td><td>122</td><td>77</td></tr>
<tr><td>6.</td><td>ಪರಿಯಾಪಟ್ಟಣ</td><td>56</td><td>46</td></tr>
<tr><td>7.</td><td>ಸರಗೂರು</td><td>28</td><td>19</td></tr>
<tr><td>8.</td><td>ನರಸೀಪುರ</td><td>115</td><td>80</td></tr>
<tr><td></td><td>ಒಟ್ಟು</td><td>1640</td><td>813</td></tr>
</table>
<u>ಚಾಮರಾಜನಗರ ಜಿಲ್ಲೆ:</u>
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>SDRF ಅನುದಾನದಡಿ ರೂ.50,000/- ಪರಿಹಾರ</th><th>ರಾಜ್ಯ ಸರ್ಕಾರದ ರೂ.1.00ಲಕ್ಷ ಪರಿಹಾರ (ಬಿಪಿಎಲ್ ಪ್ರಕರಣಗಳು)</th></tr>
<tr><td>1.</td><td>ಚಾಮರಾಜನಗರ</td><td>221</td><td>159</td></tr>
<tr><td>2.</td><td>ಗುಂಡ್ಲುಪೇಟೆ</td><td>74</td><td>62</td></tr>
<tr><td>3.</td><td>ಹಾನೂರು</td><td>48</td><td>31</td></tr>
<tr><td>4.</td><td>ಕೊಳ್ಳೆಗಾಲ</td><td>82</td><td>56</td></tr>
<tr><td>5.</td><td>ಯಳಂದೂರು</td><td>40</td><td>23</td></tr>
<tr><td></td><td>ಒಟ್ಟು</td><td>465</td><td>331</td></tr>
</table></td></tr>
</table>

ಉ)ಕೋವಿಡ್ ಸೋಂಕಿನಿಂದ ಮೃತರಾದವರಿಗೆ ಆರೋಗ್ಯ ಮತ್ತು ಕಂದಾಯ ಇಲಾಖೆಯಲ್ಲಿ ದಾಖಲೆಗಳು ಲಭ್ಯವಿರದ ಹಿನ್ನೆಲೆಯಲ್ಲಿ ಪರಿಹಾರ ಸಿಗದೇ ತೊಂದರೆಗೀಡಾಗಿರುವ ಸಾವಿರಾರು ಕುಟುಂಬಗಳ ಸಮಸ್ಯೆಯನ್ನು ಬಗೆಹರಿಸಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ವಿವರಣೆ ನೀಡುವುದು)	ಕೋವಿಡ್ ಸಾವು ದೃಢಪಟ್ಟಿದ್ದು, ಆರೋಗ್ಯ ಇಲಾಖೆಯ ದತ್ತಾಂಶದಲ್ಲಿ ಲಭ್ಯವಿಲ್ಲದ ಪ್ರಕರಣವಾದಲ್ಲಿ State Covid War Room Linelist ನಲ್ಲಿ ಸೇರ್ಪಡೆಗೊಳಿಸಿ SDRF ಮಾರ್ಗಸೂಚಿಯನ್ವಯ ಪರಿಹಾರ ಪಾವತಿಸಲು ಸರ್ಕಾರದ ಆದೇಶ ಸಂಖ್ಯೆ: ಕಂಇ 400 ಟಿಎನ್‌ಆರ್ 2021, ದಿನಾಂಕ: 10.01.2022 ರಲ್ಲಿ ಆದೇಶಿಸಲಾಗಿದೆ. ಅದರಂತೆ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಪರಿಶೀಲಿಸಿ ಅನುಮೋದನೆಗೊಂಡ ಅರ್ಹ ಕೋವಿಡ್ ಪ್ರಕರಣಗಳನ್ನು State War Room Linelist ನಲ್ಲಿ ಸೇರ್ಪಡೆಗೊಳಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಪರ ಜಿಲ್ಲಾಧಿಕಾರಿಗಳ login ನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗುತ್ತಿದೆ.
ಊ)ರಾಜ್ಯಕ್ಕೆ ವಿತರಿಸಿರುವ ಕೇಂದ್ರ ಮತ್ತು ರಾಜ್ಯದ ಒಟ್ಟು ಪರಿಹಾರದ ಮೊತ್ತವೆಷ್ಟು? (ಮಾಹಿತಿ ಒದಗಿಸುವುದು)	ಕೋವಿಡ್-19 ವೈರಾಣು ಸೋಂಕಿನಿಂದ ಮೃತಪಟ್ಟ ವ್ಯಕ್ತಿಗಳ ಕಾನೂನು ಬದ್ಧ ವಾರಸುದಾರರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ SDRF ಅಡಿ ರೂ.50,000/-ಗಳನ್ನು ನೇರ ನಗದು ವರ್ಗಾವಣೆ (DBT) ಮೂಲಕ ಪಾವತಿಸಲು ರೂ.200.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ಮುಂದುವರೆದು, ರಾಜ್ಯ ಸರ್ಕಾರವು ಬಿ.ಪಿ.ಎಲ್ ಕುಟುಂಬದವರಿಗೆ ಘೋಷಿಸಿರುವ ಹೆಚ್ಚುವರಿ ರೂ.1.00 ಲಕ್ಷ ಪರಿಹಾರ ವಿತರಣೆಗಾಗಿ ರೂ.200.00 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಸಂ. DSSP- LCQ/4/2022

(ಆರ್.ಅಶೋಕ್)
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 492(626)ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಕೋವಿಡ್ ಮೃತ ಪ್ರಕರಣಗಳು
1	Bagalkot	362
2	Ballari	1746
3	Vijayanagara	
4	Bangalore Rural	906
5	Belagavi	994
6	Bengaluru Urban	16784
7	BBMP	
8	Bidar	418
9	Chamarajanagar	522
10	Chikballapur	458
11	Chikkamagaluru	406
12	Chitradurga	233
13	Dakshina Kannada	1824
14	Davanagere	622
15	Dharwad	1359
16	Gadag	335
17	Hassan	1301
18	Haveri	667
19	Kalaburagi	874
20	Kodagu	347
21	Kolar	661
22	Koppal	537
23	Mandya	700
24	Mysuru	2552
25	Raichur	359
26	Ramanagara	346
27	Shivamogga	1125
28	Tumakuru	1208
29	Udupi	538
30	Uttara Kannada	808
31	Vijayapura	510
32	Yadgir	210
GRAND TOTAL		**39712**